1. ಪ್ರತಿಪಕ್ಷದವರಿಂದ ಧರಣಿ

ಅಕ್ರಮ ಗಣಿಗಾರಿಕೆಯನ್ನು ಸಿ.ಬಿ.ಐ. ತನಿಖೆಗೆ ವಹಿಸಲು ಪ್ರತಿಪಕ್ಷದವರಿಂದ ಧರಣಿ

(ಸದನದ ಬಾವಿಯಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಪಕ್ಷದ ಸದಸ್ಯರು ಧರಣಿಯಲ್ಲಿ ನಿರತರಾಗಿದ್ದರು)

ಅಧ್ಯಕ್ಷರು: ಬಾವಿಯಲ್ಲಿರುವಂಥ ಎಲ್ಲಾ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ. ತಾವು ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ. ಸಾಕಷ್ಟು ಗಂಭೀರವಾದ ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ.

(ಗೊಂದಲ)

ಕು.ಶೋಭಾಕರಂದ್ಲಾಜೆ: ಮಾನ್ಯ ಅಧ್ಯಕ್ಷರೆ, ನೆರೆಹಾವಳಿಯ ಬಗ್ಗೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ಎಲ್ಲಾ ಸದಸ್ಯರಲ್ಲಿ ವಿನಂತಿ. ಸಾಕಷ್ಟು ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಕಾರ್ಯಕಲಾಪಗಳು ನಡೆಯುವುದಕ್ಕೆ ಸಹಕರಿಸಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ನಾನು ಅತ್ಯಂತ ವಿನಯದಿಂದ ನಮ್ಮ ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಸದಸ್ಯರನ್ನು ವಿನಂತಿ ಮಾಡುತ್ತೇನೆ. ನಾವು ಬಿಚ್ಚು ಮನಸ್ಸಿನಿಂದ ಇದ್ದೇವೆ. ನಿಮ್ಮ ಸಲಹೆಗಳನ್ನು ಸ್ವೀಕರಿಸುವುದಕ್ಕೆ ನಾನು ಸಿದ್ದನಿದ್ದೇನೆ. ಮಾನ್ಯ ಸಿದ್ದರಾಮಯ್ಯನವರೆ, ತಾವು ಮೊದಲು ಲೋಕಾಯುಕ್ತರು ರಾಜೀನಾಮೆ ವಾಪಸ್ ತೆಗೆದುಕೊಳ್ಳಬೇಕೆಂದು ಹೇಳಿದಿರಿ. ಎಲ್ಲಾ ರೀತಿಯ ಒತ್ತಾಯ ತಂದು ಅವರ ಮನೆಯ ಬಾಗಿಲಿಗೆ ಹೋಗಿ ಲೋಕಾಯುಕ್ತರು ತಮ್ಮ ರಾಜೀನಾಮೆಯನ್ನು ವಾಪಸ್ ತೆಗೆದುಕೊಂಡರು. ಈ ಮನೆಯಲ್ಲಿ ನಡೆದಂಥ ಅಹಿತಕರ ಘಟನೆಗಳ ಬಗ್ಗೆ ತನಿಖೆಯಾಗಬೇಕೆಂದು ಹೇಳಿದಿರಿ, ಸದನ ಸಮಿತಿ ಮಾಡಿಬಿಟ್ಟು, ಅದರಲ್ಲಿ ನಾವು ನೀವು ಎಲ್ಲಾ ಪಕ್ಷದ ಸದಸ್ಯರು ಇರುತ್ತೇವೆ. ನಿಷ್ಪಕ್ಷಪಾತವಾಗಿ ತನಿಖೆ ಮಾಡೋಣ. ಆದಷ್ಟು ಬೇಗ ವರದಿ ಕೊಟ್ಟು ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳೋಣವೆಂದು ನಾವು ಹೇಳಿದ್ದೇವೆ. ಲೋಕಾಯುಕ್ತರವರಿಗೆ ಸಂಪೂರ್ಣ ಅಧಿಕಾರವನ್ನು ನಾನು ಕೊಡುತ್ತೇನೆ. ಈ ಅಕ್ರಮ ಗಣಿಗಾರಿಕೆಯ ಬಗ್ಗೆ 2003 ರಿಂದ ಇವತ್ತಿನವರೆಗೆ ಈಗಾಗಲೇ ಅವರು ತನಿಖೆ ನಡೆಸುತ್ತಿರುವುದರಿಂದ ಸಂಪೂರ್ಣ ತನಿಖೆ ಮಾಡುವುದಕ್ಕೆ ಅವರ ಕೈ ಬಲಪಡಿಸುವುದಕ್ಕೆ ನೀವು ಏನು ಸಲಹೆ ಕೊಡುತ್ತೀರೋ, ಎಲ್ಲಾ ಅಧಿಕಾರವನ್ನು

ನಾನು ಲೋಕಾಯುಕ್ತರವರಿಗೆ ಕೊಡುತ್ತೇನೆ. ಅವರು ತನಿಖೆ ಮಾಡಲಿ, ಮಾನ್ಯ ಸಿದ್ದರಾಮಯ್ಯನವರೆ, ಇದರಿಂದ ಏನಾಗುತ್ತದೆ ಎಂದರೆ, ಸಿ.ಬಿ.ಐ. ಯಿಂದ ವಿಳಂಬವಾಗುವುದು ತಪ್ಪುತ್ತದೆ. ಲೋಕಾಯುಕ್ತರು ಈಗಾಗಲೇ ತನಿಖೆ ಮಾಡುತ್ತಿರುವುದರಿಂದ ಆದಷ್ಟು ಬೇಗ ತನಿಖಾ ವರದಿ ಬರುತ್ತದೆ. ಅವರು ಎಷ್ಟೆ ದೊಡ್ಡವರಾಗಿರಲಿ, ಅಕ್ರಮಣ ಗಣಿಗಾರಿಕೆ ಮಾಡಿರುವಂಥವರ ಬಗ್ಗೆ ಮತ್ತೆ ಕಾನೂನು ಬಾಹಿರವಾಗಿ export ಮಾಡಿರುವಂಥವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅಷ್ಟೆ ಅಲ್ಲ ನೀವು ಬಂದರೆ ನಿಮ್ಮ ಜೊತೆಯಲ್ಲಿ ಬರುತ್ತೇನೆ ಇಲ್ಲವಾದರೆ ನಾನೇ ಹೋಗಿ ಪ್ರಧಾನಿಯವರನ್ನು ಭೇಟಿ ಮಾಡಿ, ರಾಷ್ಟ್ರಪತಿಗಳನ್ನು ಬೇಟಿ ಮಾಡಿ, ಈ export ಅನ್ನು ತಾತ್ಕಾಲಿಕವಾಗಿ ನಿಲ್ಲಿಸಿ ನಮ್ಮ ಸಂಪತನ್ನು ಉಳಿಸಿಕೊಳ್ಳುವುದಕ್ಕಾಗುತ್ತದೆ ಎನ್ನುವ ಮಾತನ್ನು ಹೇಳುವವನು ಇದ್ದೇನೆ. ಈ ಹಿನ್ನೆಲೆಯಲ್ಲಿ ನಾನು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ, ಅರವತ್ತು ದಿವಸ ಅಧಿವೇಶನ ನಡೆಯಬೇಕೆಂದು ತಾವೇ ಒತ್ತಾಯ ಮಾಡಿದಿರಿ, ಅದನ್ನು ಮಾಡುತ್ತಿದ್ದೇವೆ. ಇನ್ನು ಗಂಭೀರವಾದ ಅನೇಕ ಜ್ವಾಲಂತ ಸಮಸ್ಯೆಗಳು ಚರ್ಚೆಯಾಗಬೇಕಾಗಿವೆ. ಮಳೆಯಿಲ್ಲ, ರೈತ ಸಂಕಷ್ಟದಲ್ಲಿದ್ದಾನೆ. ನೆರೆ ಸಂತ್ರಸ್ಥರಿಗೆ ಮನೆ ಕಟ್ಟಿ ಕೊಡಬೇಕಾಗಿದೆ. ಬಜೆಟ್ ಮತ್ತು ಬಿಲ್‌ಗಳೆಲ್ಲವೂ ಪಾಸ್ ಆಗಬೇಕಾಗಿದೆ. ನಿಮ್ಮ absence ನಲ್ಲಿ ನಾವು ಅವೆಲ್ಲವನ್ನೂ ಮಾಡಿಕೊಳ್ಳುವುದಕ್ಕೆ ಸಿದ್ದರಿಲ್ಲ. ಆದುದರಿಂದ, ನೀವು ಬನ್ನಿ, ಅಧ್ಯಕ್ಷರ ಕೊಠಡಿಯಲ್ಲಿ ಕುಳಿತುಕೊಂಡು ನಿಮ್ಮ ಸಲಹೆ ಏನು ಎಂಬುದನ್ನು ಹೇಳಿ. ನೀವು ಏಕೆ ಹಠ ಮಾಡುತ್ತಿದ್ದೀರಿ? ನೀವು ತಾನೆ ಲೋಕಾಯುಕ್ತರ ಬಗ್ಗೆ ಹೇಳಿದ್ದು. ಹಿಂದೆ ಇದ್ದಂಥ ಯಾವುದೇ ಮುಖ್ಯಮಂತ್ರಿಗಳಾಗಿರಬಹುದು, ಮಾನ್ಯರಾದ ಎಸ್.ಎಂ.ಕೃಷ್ಣ ಇರಬಹುದು, ಧರ್ಮಸಿಂಗ್ ಇರಬಹುದು, ದೇವೇಗೌಡರವರು ಇರಬಹುದು, ಯಾವ ಕಾಲದಲ್ಲೂ ನೀವು ಸಿ.ಬಿ.ಐ.ಗೆ ಅವಕಾಶ ಕೊಡಲಿಕ್ಕೆ ಒಪ್ಪಲಿಲ್ಲ. ನಮಗ್ಯಾಕೆ ಒತ್ತಾಯ ಮಾಡುತ್ತಿದ್ದೀರಿ? ಸಿ.ಬಿ.ಐ.ನಿಂದ ಏನೇನು ಅನುಕೂಲ ಆನಾನುಕೂಲಗಳಾಗುತ್ತವೆಂಬುದು ನಿಮಗೆ ಗೊತ್ತಿದೆ. ವಿಳಂಬವಾಗುತ್ತದೆ. ಹಿಂದೆ ಎನ್.ಡಿ.ಎ. ಸರ್ಕಾರ ಇದ್ದಾಗ ನೀವು ಇದ್ದಾಗಲೂ ಸಹ ನಿಷ್ಪಕ್ಷಪಾತವಾದ ತನಿಖೆಯಾಗುವುದಿಲ್ಲವೆಂದು ಸಿ.ಬಿ.ಐ.ಗೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದಿರಿ. ಅದು ಕರೀಂಲಾಲ್ ಹಗರಣ ಇರಬಹುದು, ಬೇರೆ ಯಾವುದೇ ಇರಬಹುದು. ಈಗಲೂ ಸಹ ಕಾಂಗ್ರೇಸ್, ಜೆ.ಡಿ.ಎಸ್.ನವರೆ ದೊಡ್ಡ ಪ್ರಮಾಣದಲ್ಲಿ ಗಣಿಗಾರಿಕೆ ವ್ಯವಹಾರದಲ್ಲಿ ಇರುವುದರಿಂದ ಅದನ್ನು ಮುಚ್ಚಿ ಹಾಕುವುದಕ್ಕೆ ನೀವು ಸಿ.ಬಿ.ಐ. ಕೇಳುತ್ತೀರಿ ಎನ್ನುವ ಭಾವನೆ ಮೂಡುತ್ತೆ. ಇದಕ್ಕೆ

ಕರ್ನಾಟಕ ವಿಧಾನ ಸಭೆ

ಬುಧವಾರ 14ನೇ ಜುಲೈ 2010ರಂದು ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತ್ತು.

ಅಧ್ಯಕ್ಷರು ಶ್ರೀ ಕೆ.ಜಿ. ಬೋಪಯ್ಯನವರು ಪೀಠವನ್ನು ಅಲಂಕರಿಸಿದರು

ಅವಕಾಶ ಕೊಡಬೇಡಿ. ದಯಮಾಡಿ ಲೋಕಾಯುಕ್ತರಿಗೆ ಅಧಿಕಾರ ಕೊಡೋಣ. ಇತರೆ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ.

(ಗೊಂದಲ)

ಅಧ್ಯಕ್ಷರು: ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಮೊದಲು ಅವರೆಲ್ಲರಿಗೂ ಕುಳಿತುಕೊಳ್ಳಲಿಕ್ಕೆ ಹೇಳಿ. ನಾವು ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಎಷ್ಟು ಗೌರವದಿಂದ ಕೇಳಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಬಳ್ಳಾರಿಗೆ ಪಾದಯಾತ್ರೆ ಮಾಡುವುದಾದರೆ ಈ ಅಧಿವೇಶನ ಮುಗಿದ ಮೇಲೆ ಮಾಡಿ. ಪಾದಯಾತ್ರೆ ಮಾಡುವುದಕ್ಕೆ ಯಾರು ಬೇಡ ಎನ್ನುತ್ತಾರೆ? ಯಾವಾಗ ಬೇಕಾದರೂ ಮಾಡಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಆಯಿತು ಬಿಡಿ. ನಿಮ್ಮ ಸಲಹೆಯನ್ನು ನಾವು ಗಂಭೀರವಾಗಿ ತೆಗೆದುಕೊಳ್ಳುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಇವತ್ತೊಂದು ಹೇಳಿಕೆಯನ್ನು ಈಗತಾನೆ ಮಾಡಿದ್ದಾರೆ. ನಾವು ನಮ್ಮ ಪಕ್ಷದವರಿರಬಹುದು, ಜೆ.ಡಿ.ಎಸ್.ನವರಿರಬಹುದು, ಒಟ್ಟಾರೆಯಾಗಿ 101 ಜನ ಶಾಸಕರಿದ್ದೇವೆ. ನಮಗೆ ಸದನ ನಡೆಯಬಾರದ ಹಾಗೆ ನೋಡಿಕೊಳ್ಳಬೇಕೆನ್ನುವ ಉದ್ದೇಶ ನಮಗಿಲ್ಲ. ನಮಗೆ ಸದನ ನಡೆಯಬೇಕು ಹೆಚ್ಚು ದಿನಗಳು ನಡೆಯಬೇಕು, ಇವತ್ತು ರಾಜ್ಯದ ಜನತೆ ಅನುಭವಿಸತಕ್ಕಂಥ ಅನೇಕ ಕಷ್ಟಗಳು ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕು, ಎನ್ನುವುದು ನಮ್ಮ ಉದ್ದೇಶ. ಅದಕ್ಕೋಸ್ಕರವಾಗಿ, ನಾವು ಅನೇಕ ಸಾರಿ ಸದನ 60 ದಿವಸಗಳಿಗಿಂತ ಕಡಿಮೆ ನಡೆಸಬೇಡಿ ಎಂದು ಒತ್ತಾಯಿಸಿದ್ದೇವೆ. 60 ದಿವಸ ಸದನ ನಡೆಸಿ. ಕಳೆದ ವರ್ಷ ಬರೀ 30 ದಿವಸಗಳು ಮಾತ್ರ ನಡೆಸಿದಿರಿ. ಹೆಚ್ಚು ದಿನಗಳ ಅಧಿವೇಶನ ನಡೆಸಬೇಕು ಎನ್ನುವ ಒತ್ತಾಯವನ್ನು ನಿಮ್ಮ ಮುಂದೆ ಅನೇಕ ಸಾರಿ ಮಾಡಿದ್ದೇವೆ. ಇವತ್ತು ಬರೀ ಅಕ್ರಮ ಗಣಿಗಾರಿಕೆ ಹಗರಣ ನಡೆಯುತ್ತಿದೆ. ಇದರಿಂದಾಗಿ ರಾಜ್ಯಕ್ಕೆ ಸುಮಾರು ಇಪ್ಪತ್ತು ಸಾವಿರ ಕೋಟಿಗಿಂತಲೂ ಹೆಚ್ಚು ನಷ್ಟವಾಗಿದೆ. ಇದರಲ್ಲಿ ಕೆಲವರು ಸರ್ಕಾರದಲ್ಲಿರವಂಥವರೆ ಶಾಮೀಲಾಗಿದ್ದಾರೆನ್ನುವ ಲೋಕಾಯುಕ್ತರವರ ವರದಿ ಇದೆ. ಇದೊಂದು ದೊಡ್ಡ ಹಗರಣ ಅಷ್ಟೆ. ನಾವು ಇನ್ನೂ ಅನೇಕ ಹಗರಣಗಳನ್ನು ಪ್ರಸ್ತಾಪಿಸಬೇಕಾಗಿದೆ. ಇದಲ್ಲದೆ ಬೇರೆ ದೊಡ್ಡ ದೊಡ್ಡ ಇನ್ನು ಕೆಲವು ಹಗರಣಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ನೆರೆ ಬಗ್ಗೆ ಪ್ರಸ್ತಾಪಿಸಬೇಕಾಗಿದೆ. ಇವತ್ತು ಕರೆಂಟು ಇಲ್ಲ,

ಇದರ ಬಗ್ಗೆ ಪ್ರಸ್ತಾಪಿಸಬೇಕು, ಕುಡಿಯುವ ನೀರು ಇಲ್ಲ, ಮನೆಗಳನ್ನು ಕಟ್ಟಿಸಿ ಕೊಡುತ್ತಿಲ್ಲ, ಮಳೆಯಿಲ್ಲ, ಮಲೆನಾಡಿನಲ್ಲೂ ಕೂಡ ಮಳೆ ಕಡಿಮೆಯಾಗಿಬಿಟ್ಟಿದೆ. ಬಯಲುಸೀಮೆಗಳಲ್ಲಿ ಮಳೆಯಿಲ್ಲ. ಅನೇಕ ಕಡೆ ಬೆಳೆ ಹಾಕಿರುವ ಕಡೆ ತೊಂದರೆಯಾಗಿಬಿಟ್ಟಿದೆ. ಇಂಥ ರೈತರಿಗೆ ಸಂಬಂಧಪಟ್ಟಂಥ, ಬಡವರಿಗೆ ಸಂಬಂಧಪಟ್ಟಂಥ ಅನೇಕ ಸಮಸ್ಯೆಗಳನ್ನು ಚರ್ಚೆ ಮಾಡಿ ಇಲ್ಲಿ ಪರಿಹಾರ ಕಂಡುಕೊಳ್ಳಬೇಕಾಗಿದೆ. ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಬಹಳ ನೋವಿನಿಂದ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನೆರೆ ಸಂತಸ್ತ್ರರ ಕಷ್ಟಗಳ ಬಗ್ಗೆ ಕಳೆದ ಅಸೆಂಬ್ಲಿಯಲ್ಲಿ ನಾಲ್ಕು ಗಂಟೆಗಳ ಕಾಲ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದ ಬಗ್ಗೆ ವಿಧಾನ ಪರಿಷತ್‌ನಲ್ಲಿ ಉತ್ತರ ಕೊಟ್ಟಿದ್ದಾರೆ. ಆದರೆ, ಈ ಸದನದಲ್ಲಿ ಉತ್ತರ ಕೊಡಲಿಲ್ಲ. ನೆರೆ ಬಗ್ಗೆ ನಾನು ನಾಲ್ಕು ಗಂಟೆಗಳ ಕಾಲ ಪ್ರಸ್ತಾಪ ಮಾಡಿದ್ದೇನೆ. ಮತ್ತೆ ಈ ಕಡೆ ಇರುವಂಥ ಅನೇಕ ಜನಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಪ್ರವಾಹದಲ್ಲಿ ಸಾವಿರಾರು ಜನ ಕಷ್ಟಕ್ಕೆ ಸಿಕ್ಕಿಕೊಂಡಿದ್ದರು. ನೆರೆಯಿಂದ 18.5 ಸಾವಿರ ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು ಇವರೇ ಕೇಂದ್ರ ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ. ಮತ್ತೆ ನಾವೆಲ್ಲಾ ಹೋಗಿ ಕೇಂದ್ರಕ್ಕೆ ವರದಿ ಕೊಟ್ಟಿದ್ದೇವೆ. ಮತ್ತೆ ಮಾನ್ಯ ಪ್ರಧಾನ ಮಂತ್ರಿಯವರು ಮತ್ತು ಶ್ರೀಮತಿ ಸೋನಿಯಾ ಗಾಂಧಿಯವರು ಇಲ್ಲಿಗೆ ಬಂದು ನೆರೆ ಪೀಡಿತ ಪ್ರದೇಶವನ್ನು ನೋಡಿಕೊಂಡು ಹೋಗಿ 1698.88 ಕೋಟಿ ದುಡ್ಡು ಕೊಟ್ಟಿದ್ದಾರೆ. ಹಾಗೆಯೇ ಈ ರಾಜ್ಯದ ಜನರು 416 ಕೋಟಿ ರೂಪಾಯಿಗಳನ್ನು ವಂತಿಗೆ ರೂಪದಲ್ಲಿ ಕೊಟ್ಟಿದ್ದಾರೆ. ಆದರೆ, ಇವರು ಕೇವಲ 1632 ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಿದ್ದಾರೆ. ಜನರ ಬಗ್ಗೆ ಮತ್ತು ಮನೆ ಇಲ್ಲದೆ ಇರುವವರ ಬಗ್ಗೆ ಬಹಳ ಕಾಳಜಿ ಇದೆ ಎಂದು ಹೇಳುವ ಇವರು ಕೇವಲ 1632 ಕೋಟಿ ರೂಪಾಯಿಗಳನ್ನು ಇಲ್ಲಿಯವರೆಗೆ ಖರ್ಚು ಮಾಡಿದ್ದಾರೆ. ಇವರು ಕಳೆದ 10 ತಿಂಗಳಲ್ಲಿ ಅಲ್ಲಿರತಕ್ಕಂಥ 65 ಸಾವಿರ ಜನರಿಗೆ ಮನೆ ಕಟ್ಟಿಸಿ ಕೊಟ್ಟಿದ್ದಾರೆ ಖರ್ಚಾಗುತ್ತಿದ್ದಂಥ ಹಣ ಇವರ ಲೆಕ್ಕಚಾರದ ಪ್ರಕಾರ 7 ರಿಂದ 8 ಕೋಟಿ ರೂಪಾಯಿ ಮಾತ್ರ ಆಗುತ್ತಿತ್ತು. ಆದರೆ, ಇವರು ಒಂದು ರೂಪಾಯಿ ಕೂಡ ಖರ್ಚು ಮಾಡಿಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಕಾಂಗ್ರೆಸ್‌ನವರು ನೆರೆ ಸಂತಸ್ತ್ರರಿಗೆಂದು ಹಣ ಸಂಗ್ರಹ ಮಾಡಿ ದುರುಪಯೋಗ ಮಾಡಿಕೊಂಡಿದ್ದಾರೆ. ನೀವುಗಳು ನೆರೆ ಸಂತಸ್ತ್ರರಿಗೆಂದು ಸಂಗ್ರಹ ಮಾಡಿದ ದುಡ್ಡು ಎಲ್ಲಿದೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಆ ವಿಷಯದ ಬಗ್ಗೆ ಕೂಡ ನಾನು ಹೇಳುತ್ತೇನೆ. ನಾನು ಮಾತನಾಡಿ ನಂತರ ಅವರು ಮಾತನಾಡಲಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಕಾಂಗ್ರೆಸ್‌ನವರು ನೆರೆ ಸಂತಸ್ತರಿಗೆಂದು ಸಂಗ್ರಹ ಮಾಡಿದಂಥ ಸುಮಾರು 3–4 ಕೋಟಿ ಹಣವನ್ನು ಅವರ ಅಕೌಂಟ್‌ನಲ್ಲಿಟ್ಟುಕೊಂಡು ಆ ಹಣವನ್ನು ದುರುಪಯೋಗ ಮಾಡಿಕೊಂಡು ನಿಮ್ಮವರ ಕಡೆಯಿಂದಲೇ ಬುದ್ಧಿ ಹೇಳಿಸಿಕೊಂಡಿದ್ದೀರಿ. ಜನರಿಂದ ಸಂಗ್ರಹ ಮಾಡಿದಂಥ ನೆರೆ ಹಣ ಎಲ್ಲಿಗೆ ಹೋಯಿತೆಂದು ಹೇಳಿ?..

(ಗೊಂದಲ)

ಅಧ್ಯಕ್ಷರು: ಎಲ್ಲರು ಕುಳಿತುಕೊಂಡರೆ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ದಯವಿಟ್ಟು ಎಲ್ಲರು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನೆರೆ ಸಂತಸ್ತರಿಗೆಂದು ಸಂಗ್ರಹ ಮಾಡಿದ್ದ 2.5 ಕೋಟಿ ರೂಪಾಯಿ ಹಣ ಎಲ್ಲಿದೆ ಎಂಬುದರ ಬಗ್ಗೆ ತನಿಖೆ ಮಾಡಿಸುವುದಕ್ಕೆ ಆದೇಶ ಮಾಡಿ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಎಲ್ಲರು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನೆರೆ ಪರಿಹಾರಕ್ಕೆಂದು ಜನರು ಕೊಟ್ಟಂಥ ಹಣವನ್ನು ಇವರು ತಿಂದು ಹಾಕಿದ್ದಾರೆ.

(ಗೊಂದಲ)

ಅಧ್ಯಕ್ಷರು: ಈ ರೀತಿಯಾದರೆ ಸದನವನ್ನು ಹೇಗೆ ನಡೆಸುವುದು?

(ಗೊಂದಲ)

ಅಧ್ಯಕ್ಷರು: ಯಾವುದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ.

(ಮಾನ್ಯ ಅಧ್ಯಕ್ಷರ ಅನುಮತಿ ಮೇರೆಗೆ ಈ ಹಂತದಲ್ಲಿ ದಾಖಲಿಸಿಕೊಂಡಿರುವುದಿಲ್ಲ)

(ಗೊಂದಲ)

ಅಧ್ಯಕ್ಷರು: ಇಲ್ಲಿ ಯಾರ ಮಾತನ್ನು ಯಾರು ಕೇಳದೆ ಇರತಕ್ಕಂಥ ಪರಿಸ್ಥಿತಿ ಇದೆ? ನಾನು ಯಾರಿಗೆ ಹೇಳಲಿ? ದಯವಿಟ್ಟು ಎಲ್ಲರು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಮುಖ್ಯಮಂತ್ರಿಯವರೆ ಪ್ರಚೋದನೆ ಮಾಡುತ್ತಿದ್ದಾರೆ.

ಅಧ್ಯಕ್ಷರು: ಯಾವುದನ್ನೂ ದಾಖಲೆಗೆ ತೆಗೆದುಕೊಳ್ಳಬೇಡಿ. ನೀವುಗಳು ಮಾತನಾಡುವುದು ಯಾವುದೂ ಕೂಡ ದಾಖಲೆಗೆ ಹೋಗುವುದಿಲ್ಲ.

(ಮಾನ್ಯ ಅಧ್ಯಕ್ಷರ ಅನುಮತಿ ಮೇರೆಗೆ ಈ ಹಂತದಲ್ಲಿ ದಾಖಲಿಸಿಕೊಂಡಿರುವುದಿಲ್ಲ)

(ಗೊಂದಲ)

ಅಧ್ಯಕ್ಷರು: ಎಲ್ಲರು ದಯವಿಟ್ಟು ಕುಳಿತುಕೊಳ್ಳಿ ಎಂದು ಕೊನೆಯದಾಗಿ ಎಲ್ಲ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗಲೂ ಅವಕಾಶ ಕೊಡದೆ ಹೋದರೆ ಹೇಗೆ? ಸದನ ನಡೆಸುವುದಕ್ಕೆ ಎರಡು ಪಕ್ಷದವರು ಅವಕಾಶ ಕೊಡದೆ ಇರುವುದರಿಂದ ಇಡೀ ಕರ್ನಾಟಕ ರಾಜ್ಯದ ಜನತೆಯಲ್ಲಿ ಕ್ಷಮೆಯನ್ನು ಕೋರುತ್ತಾ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಬೆಳಿಗ್ಗೆ 11 ಗಂಟೆ 46 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ 15ನೇ ಜೂನ್ 2010ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು.)